# ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿಡಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೧೮ ಕೊಪ್ಪ ೧೯-೧೨-೮೨ ಭಾನುವಾರ ಬೆಲೆ ೪೦ ಪೈಸೆ


### ಕಿಗ್ಗದಲ್ಲಿ ರುದ್ರಹೋಮ

ಕಿಗ್ಗ: ಇತಿಹಾಸ ಪ್ರಸಿದ್ಧ ಋಷ್ಯಶೃಂಗೇಶ್ವರ ದೇವಾಲಯದಲ್ಲಿ ಪ್ರತಿ ವರ್ಷ ನಡೆಯುವ ಮಹಾರುದ್ರಹೋಮ ಸಮಾರಂಭ ಡಿ. ೧೬ರಂದು ಅದ್ದೂರಿಯಾಗಿ ನಡೆಯಿತು.

ಕಿಗ್ಗ ಸೀಮೆಯ ಸುಮಾರು ಮೂರು-ನಾಲ್ಕು ಸಾವಿರ ಜನರು ಈ ಸಂದರ್ಭದಲ್ಲಿ ಜಾತ್ರೆ ಸೇರಿದ್ದರು. ವಿಶೇಷವೆಂದರೆ ಶೃಂಗೇರಿ ಚುನಾವಣಾ ಕ್ಷೇತ್ರದ ಇಬ್ಬರೂ ಉಮೇದುವಾರರು ಸಮಾರಂಭಕ್ಕೆ ಬಂದು, ಸ್ವಕಾರ್ಯ, ಸ್ವಾಮಿಕಾರ್ಯ ಎರಡನ್ನೂ ನೆರವೇರಿಸಿಕೊಂಡದ್ದು.

### ಉಚಿತ ನಿವೇಶನ ಹಂಚಿಕೆ

(ನಮ್ಮ ಪ್ರತಿನಿಧಿಯಿಂದ)

ಉತ್ತಮೇಶ್ವರ: ದೇವಾಲದ ಕೊಡಿಗೆ ಪಂಚಾಯ್ತಿ ವ್ಯಾಪ್ತಿಯ ನಿವೇಶನರಹಿತರಿಗೆ ಡಿ. ೧೫ರಂದು ಟಿ.ಜಿ.ಚಿದಂಬರ್ ಅಧ್ಯಕ್ಷತೆಯಲ್ಲಿ ಪಂಚಾಯ್ತಿ ಸದಸ್ಯ ರಾಮರಾವ್ ನಿವೇಶನಗಳ ಹಕ್ಕುಪತ್ರ ಹಂಚಿದರು. ಕೊಪ್ಪ ವೈದ್ಯಾಧಿಕಾರಿ ಡಾ। ರಂಗನಾಥನ್ ಮುಖ್ಯ ಅತಿಥಿಗಳಾಗಿದ್ದರು. ಹೆಚ್. ಎಸ್. ಚಿನ್ನಯ್ಯ ಸ್ವಾಗತಿಸಿ, ಟಿ.ಗಣೇಶ್ ವಂದಿಸಿದರು.

ಇದೇ ಪಂಚಾಯ್ತಿ ವ್ಯಾಪ್ತಿಯ ೬ ಜನ ಜೀತವಿಮುಕ್ತರಿಗೆ ತಲಾ ೨ ಎಮ್ಮೆಗಳನ್ನು ಡಿ. ೧೪ರಂದು ಹಂಚಲಾಯಿತು.

## ಶೃಂಗೇರಿ ಕ್ಷೇತ್ರ: ಕಣದಲ್ಲಿ ಉಳಿದವರು ೪ ಮಂದಿ

# ಕಾಂಗ್ರೆ — ಜನತಾ ಮುಖಾಮುಖಿ

**ಕೊಪ್ಪ: ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಉಳಿದಿರುವುದು ಹಳೇ ಎದುರಾಳಿಗಳಿಬ್ಬರ ನಡುವಿನ ಗಂಭೀರ ಹಣಾಹಣಿ—ಇಂಗ್ಲಿಷಿನಲ್ಲಿ "ದಿ ಬ್ಯಾಟಲ್ ರಾಯಲ್" ಅಂದಹಾಗೆ.**

**ಭಾಜಪದ ಬಿ.ಎಸ್.ವಿಠ್ಠಲ ರಾವ್ ಅಲ್ಲದೆ ಇನ್ನೂ ಐದು ಜನ ಪಕ್ಷೇತರರು ನಾಮಪತ್ರಗಳನ್ನು ಹಿಂತೆಗೆದುಕೊಂಡಿದ್ದು, ಕಣದಲ್ಲಿ ಇಬ್ಬರು ಪಕ್ಷೇತರರಿದ್ದಾರಾದರೂ ಸ್ಪರ್ಧೆ ಇರುವುದು ನೇರವಾಗಿ ಕಾಂಗ್ರೆಸ್‌ನ ಬೇಗಾನೆ ರಾಮಯ್ಯ ಮತ್ತು ಜನತಾದ ಹೆಚ್.ಜಿ.ಗೋವಿಂದಗೌಡ-ಇವರಿಬ್ಬರ ನಡುವೆ ಎಂಬುದು ಜನಜನಿತ.**

### ಭಾಜಪಾ ಸ್ಪರ್ಧೆಯಿಂದ ಹಿಂದಕ್ಕೆ

"ಜನತಾ ಪಕ್ಷದ ಜಿಲ್ಲಾ ನಾಯಕರ ಬೇಜವಾಬ್ದಾರಿ ವರ್ತನೆಯಿಂದಾಗಿ, ಎಲ್ಲಾ ಏಳು ಕ್ಷೇತ್ರಗಳಲ್ಲೂ ವಿರೋಧ ಪಕ್ಷಗಳ ಏಕೈಕ ಅಭ್ಯರ್ಥಿಯನ್ನು ನಿಲ್ಲಿಸಬೇಕೆಂಬ ಭಾಜಪಾದ ಪ್ರಾಮಾಣಿಕ ಯತ್ನ ಫಲಿಸದಾಯಿತು. ಆದರೂ, ಕಾಂಗ್ರೆಸ್‌ನ ಪ್ರಬಲ ಅಭ್ಯರ್ಥಿಯಾದ ಬೇಗಾನೆ ರಾಮಯ್ಯನವರ ವಿರುದ್ಧ ವಿರೋಧ ಪಕ್ಷಗಳ ಏಕೈಕ ಅಭ್ಯರ್ಥಿಯಾದ, ರೈತ ಹೋರಾಟದ ಮುಂಚೂಣಿಯ ನಾಯಕರಾದ ಹೆಚ್.ಜಿ.ಗೋವಿಂದ ಗೌಡರನ್ನು ಬೆಂಬಲಿಸಿ ನಾನು ನನ್ನ ಉಮೇದುವಾರಿಕೆಯನ್ನು ವಾಪಸ್ ಪಡೆಯುತ್ತಿದ್ದೇನೆ." ಎಂದು ಭಾಜಪಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್.ವಿಠ್ಠಲ ರಾವ್ ತಿಳಿಸಿ ತಮ್ಮ ನಾಮಪತ್ರ ಹಿಂತೆಗೆದುಕೊಂಡಿರುವುದಲ್ಲದೆ, ತಮ್ಮ ಪಕ್ಷದ ಕಾರ್ಯಕರ್ತರೆಲ್ಲರೂ ಗೋವಿಂದ ಗೌಡರ ಜಯಕ್ಕೆ ಶ್ರಮಿಸಬೇಕೆಂದು ಕರೆ ಕೊಟ್ಟಿದ್ದಾರೆ.

ಸ್ಪರ್ಧೆಯಲ್ಲಿರುವ ಇಬ್ಬರು ಪಕ್ಷೇತರರೆಂದರೆ ವಿಠೋಬ ಮತ್ತು ಪ್ರಭಾಕರ.

### ಮತ ಯಾಚನೆ ಶುರು

ಈಗಾಗಲೇ ಇಬ್ಬರು ಸ್ಪರ್ಧಿಗಳೂ ಮತದಾರರ ಹತ್ತಿರ ಮತ ಬೇಡುವ ಕೆಲಸ ಶುರು ಮಾಡಿದ್ದಾರೆ. ಡಿ. ೧೬ರಂದು ಕಿಗ್ಗದಲ್ಲಿ ರುದ್ರಹೋಮದ ದಿನ ಸೇರಿದ್ದ ಮೂರ್ನಾಲ್ಕು ಸಾವಿರ ಜನರೇ ಅವರ ಪ್ರಚಾರಕ್ಕೆ ಮೊದಲ ಗುರಿ.

ಹೇಗೆ ನೋಡಿದರೂ ದೃಷ್ಟಿಯಿಂದ ಸಮಬಲರಾದ ಈ ಇಬ್ಬರ ನಡುವೆ ನಡೆಯುವ ಈ ಗಂಭೀರ ಸೆಣಸಾಟ ಕಡೆತನಕ ತನ್ನ ಗಾಂಭೀರ್ಯ ಉಳಿಸಿಕೊಳ್ಳುತ್ತದೆಯೇ, ಕಾದು ನೋಡಬೇಕು.

## ಯುವ ಕಾಂಗ್ರೆಸ್ ಕಾರ್ಯದರ್ಶಿ

# ರಾಜೀನಾಮೆ

**ಕೊಪ್ಪ: ಈ ತಾಲ್ಲೂಕಿನ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದ ಜಯಪ್ರಕಾಶ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾಗಿ ತಿಳಿಸಿದ್ದಾರೆ.**

ಅವರು ಪತ್ರಿಕಾ ಹೇಳಿಕೆ ನೀಡಿ, "ಕಾಂಗ್ರೆಸ್ ಸರ್ಕಾರ ದೀನ ದಲಿತರ ಹಾಗೂ ಹರಿಜನ-ಗಿರಿಜನರ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸದ್ದರಿಂದ ಬೇಸತ್ತು ಪಕ್ಷಕ್ಕೆ ರಾಜೀನಾಮೆ ನೀಡಿ ನನ್ನ ಅನೇಕ ಬೆಂಬಲಿಗರೊಂದಿಗೆ ಈ ಚುನಾವಣೆಯಲ್ಲಿ ವಿರೋಧ ಪಕ್ಷದ ಒಮ್ಮತದ ಅಭ್ಯರ್ಥಿಯಾದ ಶ್ರೀ ಹೆಚ್.ಜಿ.ಗೋವಿಂದ ಗೌಡರಿಗೆ ನಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೇನೆ. ಕಾಂಗ್ರೆಸ್ ಮುಖಂಡರು ಪಕ್ಷಕ್ಕೆ ಮರಳಿ ಬರುವಂತೆ ಭಾರಿ ಒತ್ತಾಯ ತಂದಾಗ್ಯೂ ನಾನು ಮಣಿಯದೆ ರಾಜೀನಾಮೆ ನೀಡಿ ಹೊರ ಬಂದಿರುತ್ತೇನೆ." ಎಂದು ತಿಳಿಸಿದ್ದಾರೆ.

## ನಿರಾಕರಣೆ

ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಜೀನಾಮೆಯ ವರದಿಯನ್ನು ನಿರಾಕರಿಸಿರುವ ಅಧ್ಯಕ್ಷ ಹೆಚ್. ಎಂ. ಶ್ರೀಧರ್, "ಒಂದೆರಡು ಸದಸ್ಯರು ಸ್ವಂತ ಕಾರಣಗಳಿಂದ ರಾಜೀನಾಮೆ ನೀಡಿದ್ದಾರೆ. ಆದರೆ ಬಹಳ ಜನ ಯುವಕರು ಈಚೆಗೆ ಕಾಂಗ್ರೆಸ್ (ಐ)ಗೆ ಸದಸ್ಯರಾಗಿ, ಶ್ರೀಯುತ ಬೇಗಾನೆ ರಾಮಯ್ಯನವರನ್ನು ಹಿಂದಿನ ಸಾರಿಗಿಂತ ಅಧಿಕ ಮತಗಳಿಂದ ಗೆಲ್ಲಿಸಲು ಶ್ರಮವಹಿಸುತ್ತಿದ್ದಾರೆ" ಎಂದು ತಿಳಿಸಿದ್ದಾರೆ.

# ಮಂತ್ರಿಗಳ ಕ್ಷೇತ್ರದಲ್ಲೇ ರೈತರ ದರೋಡೆ

## ರೈತ ಸಂಘದ ಕೋಡ್ಲು ವೆಂಕಟೇಶ್ ಆರೋಪ

**ಕೊಪ್ಪ: ಇಲ್ಲಿನ ಡಿಸಿಸಿ ಬ್ಯಾಂಕಿನ ಅಧಿಕಾರಿಗಳು ಪೋಲೀಸರ ನೆರವಿನಿಂದ ರೈತರ ಚರಾಸ್ತಿ ಜಪ್ತಿ ಕೆಲಸವನ್ನು ಮುಂದುವರಿಸಿದ್ದಾರೆಂದು ರಾಜ್ಯ ರೈತ ಸಂಘದ ಮುಖಂಡ ಕೋಡ್ಲು ವೆಂಕಟೇಶ್ ಆರೋಪಿಸಿದ್ದಾರೆ.**

ಅತ್ತಿಕೊಡಿಗೆ ಗ್ರಾಮದ ಶ್ರೀಧರ ಮೂರ್ತಿ ಎಂಬವರ ಮನೆಯಲ್ಲಿ ಅವರಿಲ್ಲದಾಗ ಈ ವರ್ಷದಲ್ಲಿ ಇದು ಎರಡನೆಯ ಬಾರಿಗೆ ಜಪ್ತಿ ನಡೆಸಿ, ಒಂದು ಮೂಟೆ ಅಡಿಕೆ ಒಯ್ದಿದ್ದಾರೆಂದು ಅವರು 'ಮುಂಜಾವು'ಗೆ ತಿಳಿಸಿ, ಚರಾಸ್ತಿ ಜಪ್ತಿ ವಿರುದ್ಧ ಹೈಕೋರ್ಟಿನ ತಡೆಯಾಜ್ಞೆಯಿದ್ದರೂ ಮಂತ್ರಿಗಳ ಕ್ಷೇತ್ರದಲ್ಲೇ ಇದರ ಉಲ್ಲಂಘನೆ ನಡೆಯುತ್ತಿರುವುದು "ಹಗಲು ದರೋಡೆ" ಎಂದು ವೆಂಕಟೇಶ್ ವರ್ಣಿಸಿದ್ದಾರೆ. ಇದೇ ಸುತ್ತಮುತ್ತ ಇನ್ನೂ ಎಂಟು ಕಡೆ ಜಪ್ತಿಯ ವರದಿ ಬಂದಿರುವುದಾಗಿ ಅವರು ತಿಳಿಸಿದ್ದಾರೆ.

ಈ ಬಗ್ಗೆ ಡಿ. ೧೨ರಂದು ಇಲ್ಲಿ ಬೇಗಾನೆ ರಾಮಯ್ಯನವರನ್ನು ಅವರುಗಳು ಭೇಟಿ ಮಾಡಿದಾಗ ಪ್ರಕರಣವನ್ನು ಪರಿಶೀಲಿಸುವುದಾಗಿ ಅವರು ಭರವಸೆ ಕೊಟ್ಟರೆಂದು ತಿಳಿಸಿದ್ದು, ಜಪ್ತಿ ಕ್ರಮಗಳು ಹೀಗೇ ಮುಂದುವರಿದರೆ ರೈತ ಸಂಘ ಹಳ್ಳಿ ಹಳ್ಳಿಗಳಲ್ಲಿ "ಈ ಮನೆ ಮುರುಕರಿಗೆ ಮತ ನೀಡಬೇಡಿ" ಎಂದು ಪ್ರಚಾರ ಕೈಗೊಳ್ಳಬೇಕಾಗುತ್ತದೆಂದು ಎಚ್ಚರಿಸಿದ್ದಾರೆ.

# ಶೃಂಗೇರಿಗೆ ಪ್ರಧಾನಿ

ಶೃಂಗೇರಿ: ಚುನಾವಣಾ ಪ್ರಚಾರಕ್ಕಾಗಿ ಇದೇ ೧೪ರಂದು ಜಿಲ್ಲೆಗೆ ಭೇಟಿ ಕೊಟ್ಟ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಪುನಃ ಡಿ. ೨೯ರಂದು ಬರಲಿದ್ದು, ಅಂದು ಅವರು ಮುಖ್ಯ ಮಂತ್ರಿ ಗುಂಡೂರಾವ್ ಮುಂತಾದವರೊಂದಿಗೆ ಶೃಂಗೇರಿಯಲ್ಲಿ ತಂಗುವರೆಂದು ಹೇಳಲಾಗಿದೆ.

### ಹೇರೂರಿನಲ್ಲಿ ಯುವಕ ಸಂಘ ಉದ್ಘಾಟನೆ

ಜಯಪುರ: ಇಲ್ಲಿಗೆ ಸಮೀಪದ ಹೇರೂರಿನಲ್ಲಿ ಡಿ. ೧೨ರಂದು 'ಆದರ್ಶ ಯುವಕ ಸಂಘ'ದ ಉದ್ಘಾಟನೆಯನ್ನು ಸಿಸಿಐ ಜಿಲ್ಲಾ ಕಾರ್ಯದರ್ಶಿ ಬಿ.ಕೆ.ಸುಂದರೇಶ್ ನೆರವೇರಿಸಿದರು. ಜಿ.ಕೆ.ಸುಬ್ಬಣ್ಣ ಅಧ್ಯಕ್ಷತೆ ವಹಿಸಿದ್ದರು.

ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾರೆಂಬ ಬಗ್ಗೆ ಎದ್ದಿದ್ದ ಊಹಾಪೋಹಗಳೆಲ್ಲ ತಣ್ಣಗಾಗಿ, ಅಂತಿಮವಾಗಿ ಬೇಗಾನೆ ರಾಮಯ್ಯನವರೇ ಪುನಃ ಸ್ಪರ್ಧೆಗೆ ಇಳಿದಿದ್ದಾರೆ. ಪ್ರಭಾವಿ ಎದುರಾಳಿಯಿಂದ ಪ್ರಬಲ ಸ್ಪರ್ಧೆ ಎದುರಿಸುತ್ತಿರುವ ಅವರಿಗೂ 'ಮುಂಜಾವು' ಬಳಗದ ಹಾರ್ದಿಕ ಶುಭಾಶಯಗಳು.

### ಕೂಲಿಯ ಯುವತಿ ಸಾವು: ಆತ್ಮಹತ್ಯೆಯ ಶಂಕೆ

ಕಿಗ್ಗ: ಇಲ್ಲಿಗೆ ಸಮೀಪದ ಮಗೇಬೈಲಿನ ಬಿ.ಕೆ.ಶೇಷಗಿರಿಯಪ್ಪ ಅವರ ಮನೆಯ ಕೂಲಿ ಹೆಣ್ಣೊಬ್ಬಳು ಡಿ. ೯ರಂದು ಮೃತಪಟ್ಟಿದ್ದು, ಇದು ಆತ್ಮಹತ್ಯೆಯೆಂದು ಶಂಕಿಸಲಾಗಿದೆಯೆಂದೂ, ಈ ಬಗ್ಗೆ ಶೃಂಗೇರಿ ಪೋಲೀಸರಿಗೆ ತಿಳಿಸಲಾಗಿದೆಯೆಂದೂ ತಿಳಿದು ಬಂದಿದೆ. ಪ್ರಕರಣ ದಾಖಲಾಗಿಲ್ಲ. ಹೆಚ್ಚಿನ ವಿವರಗಳು ದೊರಕಿಲ್ಲ.

### ಅಪಘಾತ: ಅರಣ್ಯರಕ್ಷಕನ

# ದುರ್ಮರಣ

ಕೊಪ್ಪ: ಇಲ್ಲಿಂದ ತೀರ್ಥಹಳ್ಳಿಗೆ ಹೋಗುವ ರಸ್ತೆಯಲ್ಲಿ ಅಮ್ಮಡಿ ಬಳಿ ಡಿ. ೧೪ರ ಸಂಜೆ ೬ ಗಂಟೆ ಹೊತ್ತಿಗೆ ಮೋಟಾರ್ ಸೈಕಲ್ಲಿನಲ್ಲಿ ಹೋಗುತ್ತಿದ್ದ ವೆಂಕಟೇಶ್ (೩೦) ಎಂಬ ಅರಣ್ಯ ರಕ್ಷಕ ಮೋರಿಯ ಹೊಂಡಕ್ಕೆ ವಾಹನ ಬಿದ್ದು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ತೀವ್ರ ಛಳಿಯ ಕಾರಣ ಹೆಲ್ಮೆಟ್ಟನ್ನು ಹಿಂಬದಿ ಸವಾರನಾದ ಹುಡುಗನಿಗೆ ಕೊಟ್ಟಿದ್ದು, ತೀವ್ರ ಗಾಯಗಳೊಂದಿಗೆ ಆತನನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಕೊಪ್ಪ ಪೋಲೀಸರು ಮಹಜರು ನಡೆಸಿದರು.

## ಕಲೆ ಸಾಹಿತ್ಯ ಕ್ರೀಡೆ

# ಕೊಪ್ಪ ತಾ|| ಯುವ ಮೇಳ: ಒಂದು ಸಮೀಕ್ಷೆ

ಸಾಮಾನ್ಯವಾಗಿ ಮೇಳ ಸಭೆ-ಸಮಾರಂಭಗಳಲ್ಲಿ ಇಂದು ಮನರಂಜನೆಯ ಕಾರ್ಯಕ್ರಮಗಳೇ ಮುಖ್ಯ ಆಕರ್ಷಣೆಯಾಗಿರುತ್ತವೆಂದರೆ ತಪ್ಪಿಲ್ಲ. ಕಾರ್ಯಕ್ರಮಗಳಿಗೆ ಜನ ಸೇರಬೇಕಾದರೆ ಮನರಂಜಿಸುವ ಸಾಂಸ್ಕೃತಿಕ ಚಟುವಟಿಕೆಗಳಿರಬೇಕು. ಇಂದು ನಾವು ಸ್ಪರ್ಧೆಗಳಲ್ಲೂ ಇಂತಹ ಹಲವಾರು ಸಾಂಸ್ಕೃತಿಕ ಸ್ಪರ್ಧೆಗಳನ್ನು ಕಾಣುತ್ತೇವೆ. ಅಂತೆಯೇ ಡಿ. ೪ ಮತ್ತು ೫ರಂದು ಕಲ್ಕೆರೆ ಹಿ|| ಪ್ರಾ|| ಶಾಲಾ ಆವರಣದಲ್ಲಿ ನಡೆದ ಕೊಪ್ಪ ತಾ|| ಯುವಜನ ಮೇಳದಲ್ಲಿ ನಡೆದದ್ದೂ ಬರೀ ಇಂತಹ ಸಾಂಸ್ಕೃತಿಕ ಸ್ಪರ್ಧೆಗಳೇ.

ತಾ|| ಅ|| ಮಂಡಳಿ, ತೆಂಗಿನ ಮನೆ ಮತ್ತು ಕಲ್ಕೆರೆ ಯುವಕ ಸಂಘಗಳು ಮತ್ತು ಜಿಲ್ಲಾ ಯುವಜನ ಸೇವಾ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಮೇಳ ಕಲ್ಕೆರೆ ಜನತೆಗೆ ಉತ್ತಮ ಮನರಂಜನೆ ನೀಡಿತು ಎಂದು ಹೇಳಬಹುದು. ವಿವಿಧ ರೀತಿಯ ಗೀತೆಗಳು, ಕೋಲಾಟ, ಪಂಥರೀ ಭಜನೆ, ಪ್ರಶ್ನಾವಳಿ, ಒಗಟು, ಏಕಪಾತ್ರಾಭಿನಯ, ನಾಟಕ, ಚರ್ಚಾಸ್ಪರ್ಧೆ, ಮುಂತಾದ ಸ್ಪರ್ಧೆಗಳನ್ನು ಏರ್ಪಾಡಿಸಿದುದು ಜನತೆಗೆ, ಮುಖ್ಯವಾಗಿ ಯುವ ಸಮಾಜಕ್ಕೆ ಮನರಂಜನೆಯ ಜೊತೆಗೆ ಜ್ಞಾನವರ್ಧನೆಗೆ ಉಪಯುಕ್ತವಾಗಬಹುದೆಂದೆನಿಸಿತು.

ತೆಂಗಿನ ಮನೆಯ ಕಲಾ ಜ್ಯೋತಿ ಯುವತಿ ಮಂಡಳಿಯ ಕು|| ವಿಜಯಾ ಅತ್ಯುತ್ತಮ ಕಲಾಕೌಶಲ್ಯ ತೋರಿಸಿದರು. ಮಹಿಳೆಯರಿಗಾಗಿ ಇದ್ದ ಹೆಚ್ಚಿನ ಬಹುಮಾನಗಳು ಅವರ ವಶವಾದವು. ಅದೇ ಯುವತಿ ಮಂಡಳಿಯ ಗಾಯಿತ್ರಿಯವರೂ ಉತ್ತಮವಾಗೇ ಸ್ಪರ್ಧಿಸಿ ಅನೇಕ ಬಹುಮಾನ ಪಡೆದರು. ಅತ್ಯುತ್ತಮ ಕಲಾವಂತಿಕೆ ಇರುವ, ಕೇಳಿದಷ್ಟೂ ಇನ್ನೂ ಕೇಳಬೇಕೆನ್ನಿಸುವ ಅವರ ಉತ್ತಮ, ಸುಮಧುರ ಗಾಯನ ಕಲೆಗೆ ಪ್ರೋತ್ಸಾಹ ಸರಿಯಾಗಿ ಸಿಗುತ್ತಿಲ್ಲವೇನೋ ಅನ್ನಿಸಿತು. ಉತ್ತಮ ಅವಕಾಶಗಳು ಅವರಿಗೆ ಸಿಗಲಿ ಎಂದು ನಮ್ಮ ಹಾರೈಕೆ. ಹಾಗೆಯೇ ಹುಲಿಗೆರಡಿ ಯುವಕ ಸಂಘದ ನಾಗೇಶ್ ಉತ್ತಮ ಸ್ಪರ್ಧೆ ನೀಡಿ ಯುವಕರ ಹೆಚ್ಚಿನ ಬಹುಮಾನಗಳನ್ನು ತಮ್ಮದಾಗಿಸಿಕೊಂಡರು.

ಇವೆಲ್ಲಕ್ಕಿಂತ ಮುಖ್ಯವಾಗಿ ಒಬ್ಬ ಹರಿಜನ ಯುವತಿ ಸ್ಪರ್ಧೆಯೊಂದರಲ್ಲಿ ಭಾಗವಹಿಸಿದ್ದರಾದರೂ ಬಹುಮಾನ ಬರದಿದ್ದನ್ನು ಕಂಡು ನೊಂದ ಕು|| ವಿಜಯಾ, "ಹರಿಜನ-ಗಿರಿಜನರು ಮುಂದೆ ಬರಬೇಕೆಂದು ಎಲ್ಲರೂ ಹೇಳುತ್ತಾರೆಯೇ ವಿನಃ ಪ್ರೋತ್ಸಾಹ ಸಿಗುತ್ತಿಲ್ಲ. ಈ ಹರಿಜನ ಯುವತಿ ಉತ್ತಮವಾಗಿ ಹಾಡಿದಳಾದರೂ ಬಹುಮಾನ ಸಿಕ್ಕಿಲ್ಲ. ಆದ್ದರಿಂದ ನನಗೆ ಬಂದ ಬಹುಮಾನದಲ್ಲೇ ಅವಳಿಗೆ ಬಹುಮಾನ ನೀಡುತ್ತೇನೆ" ಎಂದು ಹೇಳಿ ಬಹುಮಾನವೊಂದನ್ನು ಅವರಿಗೆ ನೀಡಿದರು. ಕು|| ಗಾಯಿತ್ರಿಯೂ ಅವರಿಗೊಂದು ಬಹುಮಾನ ನೀಡಿದರು. ಇದು ವೇದಿಕೆಯಲ್ಲಿದ್ದ ಮುಖಂಡರೂ ಸೇರಿದಂತೆ ಎಲ್ಲರನ್ನೂ ನಿಬ್ಬೆರಗುಗೊಳಿಸಿತು.

(೩ನೇ ಪುಟಕ್ಕೆ)

# ಹಿತವಾಗಿ ಮೂಡಿ ಬಂದ ಸಾಂಸ್ಕೃತಿಕ ಕಾರ್ಯಕ್ರಮ

—ಎಂ. ನಾರಾಯಣ

ಡಿಸೆಂಬರ್ ೫ರಂದು ಕೊಪ್ಪದ ಬ್ಯಾಂಕರ್ಸ್ ರಿಕ್ರಿಯೇಷನ್ ಕ್ಲಬ್ಬಿನ ಕ್ಲಬ್ ಡೇ ಅಂಗವಾಗಿ ಮೂಡಿಬಂದ ಸಾಂಸ್ಕೃತಿಕ ಕಾರ್ಯಕ್ರಮ ನೀರಸವಾಗಿ ಆರಂಭಗೊಂಡರೂ ಮುಂದುವರಿದಂತೆ ಮನರಂಜಿಸಿತು. ಲಘು ಸಂಗೀತ ಕಾರ್ಯಕ್ರಮದಲ್ಲಿ ಗಾಯಕರಲ್ಲಿಯ ಗಾಯನ ಪ್ರತಿಭೆಯ ಅಭಾವವನ್ನು ಶ್ರೀ ರತ್ನಾಕರ ಹಾಗೂ ಶ್ರೀ ರಮೇಶ್ ಅವರ ಎಲೆಕ್ಟ್ರಿಕ್ ಗಿಟಾರ್ ಮತ್ತು ತಬಲ ವಾದನಗಳು ಮರೆಮಾಚಿದವು. ಶ್ರೀ ವೆಂಕಟರಾಯಪ್ರಭು ಅವರ ಕೊಳಲು ವಾದನ ಉತ್ತಮವಾಗಿತ್ತು.

ಶ್ರೀ ಮಧ್ಯಸ್ಥರ "ಆಕ್ರೋಶ" ಕಿರು ನಾಟಕ ಚೆನ್ನಾಗಿ ಮೂಡಿಬಂತು. ವಿಡಂಬನಾತ್ಮಕ, ಹೊಸಹೆಜ್ಜೆಯ ಇಂತಹ ನಾಟಕಗಳನ್ನು ಹೊರತರಲು ಮಧ್ಯಸ್ಥರು ಹೆಚ್ಚು ಹೆಚ್ಚು ಪ್ರಯತ್ನಿಸಲಿ.

"ಸಮಯಕ್ಕೊಂದು ಸುಳ್ಳು" ನಾಟಕ ಒಟ್ಟಾರೆ ಎಲ್ಲರನ್ನು ನಗಿಸಿತು. ನಾರಾಯಣ ಚಿಕ್ಕಪ್ಪ ಹಾಗೂ ಮಾಸ್ತರ ಪಾತ್ರಧಾರಿಗಳ ಅಭಿನಯ ಮೆಚ್ಚುವಂತಿತ್ತು.

ಜಡ್ಡುಗಟ್ಟಿದ ವಾತಾವರಣಕ್ಕೆ ಆಕ್ರೋಶದಂತಹ ನಾಟಕಗಳು ಹಾಗೂ ರಂಗ ಮನರಂಜನೆಯಿಂದ ದೂರ ಉಳಿದ ಈ ಊರಿಗೆ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಆಗಾಗ್ಗೆ ಬರಲಿ.

## ಬೇಬಿ ಫುಡ್ ಜಾಹೀರಾತನ್ನು ನಿಷೇಧಿಸುವ ಮಸೂದೆ ಜಾರಿಗೆ ಬರಲಿದೆ

ಇಂದು ಸುಮಾರು ಹತ್ತು ಬಗೆಯ ಹಾಲಿನ ಪುಡಿಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. "ಡಬ್ಬಿ ಹಾಲು" ಎಂದೇ ಪ್ರಸಿದ್ಧವಾಗಿರುವ ಇವುಗಳನ್ನು 'ಶಿಶು ಆಹಾರ'ವೆಂದೂ 'ತಾಯಿಯ ಹಾಲಿಗೆ ಬದಲಿಯಾದ, ಅತ್ಯಂತ ಪೌಷ್ಟಿಕ ಆಹಾರ' ವೆಂದೂ ಅವುಗಳ ತಯಾರಕರು ಪ್ರಚಾರ ಮಾಡುತ್ತಿದ್ದಾರೆ. ಆದರೆ ಇದು ಬೋಗಸ್. "ಈ ರೀತಿ ಜಾಹೀರಾತು ನೀಡುವುದನ್ನು ನಿಷೇಧಿಸಬೇಕು" ಎಂಬುದಾಗಿ ವಿಶ್ವ ಆರೋಗ್ಯ ಸಂಸ್ಥೆಯು ಎರಡು ವರ್ಷಗಳ ಹಿಂದೆಯೇ ಎಲ್ಲಾ ದೇಶಗಳ ಸರ್ಕಾರಗಳಿಗೂ ಸೂಚಿಸಿತ್ತು.

ಈ ಸಂಬಂಧ ಮಸೂದೆಯೊಂದು ಈಗ ಅಂತಿಮ ಹಂತದಲ್ಲಿದ್ದು ಅಂಗೀಕಾರಕ್ಕಾಗಿ ಕೇಂದ್ರ ಸಂಪುಟಕ್ಕೆ ಕಳುಹಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಶ್ರೀ ಖಿರ್ ನಸ್ರುಲ್ಲಾ ಈಚೆಗೆ ವರದಿಗಾರರಿಗೆ ತಿಳಿಸಿದರು.

ಆದರೆ ಅನಿವಾರ್ಯ ಪ್ರಕರಣದಲ್ಲಿ ಈ ಆಹಾರಗಳನ್ನು ಮೊಲೆ ಹಾಲಿಗೆ ಬದಲಿಯಾಗಿ ಶಿಫಾರಸು ಮಾಡುವ ವೈದ್ಯರುಗಳಿಗೆ ಈ ಮಸೂದೆಯಲ್ಲಿ ಸೂಕ್ತ ರಕ್ಷಣೆ ನೀಡಲಾಗುವುದು. ಇಂಥ ಶಿಫಾರಸು-ಯೋಗ್ಯವಾದ, "ವೈದ್ಯರ ಸ್ಯಾಂಪಲ್"ಗಳಿಗೆ ನಿಯಂತ್ರಣ ವಿಧಿಸಲಾಗುವುದು ಎಂದವರು ಹೇಳಿದರು.

ಕಳೆದ ವರ್ಷ ಅಹಮ್ಮದಾಬಾದಿನ ಬಳಕೆದಾರರ ಸಂಘಟನೆಯಾದ ಕನ್ಸೂಮರ್ಸ್ ಎಜ್ಯುಕೇಶನ್ ಎಂಡ್ ರಿಸರ್ಚ್ ಸೆಂಟರ್‌ನ ನೇತೃತ್ವದಲ್ಲಿ ಭಾರತದ ಎಲ್ಲಾ ಬಳಕೆದಾರರ ಸಂಘಟನೆಗಳೂ ಈ ಕುರಿತು ಮಸೂದೆಯೊಂದನ್ನು ಜಾರಿಗೆ ತರುವಂತೆ ಸರಕಾರವನ್ನು ಒತ್ತಾಯಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

(ಸೌಜನ್ಯ: "ಬಳಕೆದಾರರ ವೇದಿಕೆ," ಉಡುಪಿ.)

## ನಮ್ಮ ಪ್ರತಿನಿಧಿಗಳು / ಏಜೆಂಟರು

೧) ಶೃಂಗೇರಿ: ಎಸ್. ನಾಗೇಶ ರಾವ್, ಸಿಂಡಿಕೇಟ್ ಬ್ಯಾಂಕ್ ಪಿಗ್ಮಿ ಸಂಗ್ರಾಹಕ. ಪ್ರತಿಗಳು ದೊರಕುವ ಸ್ಥಳ: ಹೆಚ್. ಎಸ್. ಕೃಷ್ಣಮೂರ್ತಿ, ಬಸ್‌ಸ್ಟ್ಯಾಂಡ್ ಅಂಗಡಿ, ಶೃಂಗೇರಿ.

೨) ನ.ರಾ.ಪುರ: ಮಂಜುನಾಥ್, ಕೆನರಾ ಬ್ಯಾಂಕ್, ನ.ರಾ.ಪುರ.

೩) ಉತ್ತಮೇಶ್ವರ: ಯು. ರಮೇಶ್, ಪೋಸ್ಟ್‌ಮಾಸ್ಟರು, ಉತ್ತಮೇಶ್ವರ.

೪) ಹರಿಹರಪುರ: ಮಾಕೋಡು ಮಂಜುನಾಥ, ಅಂಚೆ ಕಚೇರಿ, ಹರಿಹರಪುರ.

೫) ಬಿದರಗೋಡು: ಎಸ್. ಕೆ. ಶೃಂಗೇ

## ಮಡಿ

ಮನೆಯಲ್ಲಿ
ಹೊಲೆಯನ ನೆರಳು
ತಾಕಿದರೂ
ಸ್ನಾನ ಮಾಡುವ,
ಜನಿವಾರ ಬದಲಿಸುವ
"ಜನ"
ಬಸ್ಸಿನಲ್ಲಿ
ಅದೇ ಹೊಲೆಯನ
ಪಕ್ಕದಲ್ಲೇ ಕುಳಿತು
ಬಸ್ಸಿಳಿದು
ಸೀದಾ

## ಶ್ರಾದ್ಧ

ಅಪ್ಪಮ್ಮ ಸತ್ತುದಕೆ ಮಾಡುವರು ಶ್ರಾ
ಇವರೆಲ್ಲ ಮೂಢರು, ಮೂರ್ಖರು ಶುದ್ಧ
ಬದುಕಿ ಸತ್ತವರಿಗಾಗಿ ಸಾಲಶೂಲವ
ಸತ್ತು ಬದುಕುವರು ಇವರೆಲ್ಲ ನೋಡಿ!

ಮಾ.
ಮೋಲ

## ಕಮಂಡಲ ಗಣಪತಿ ಪ್ರಕರಣ: "ಯುವಕ ಸಂಘದ ಅಧ್ಯಕ್ಷರ ಮೇಲೆ ಆರೋಪ ಸಲ್ಲ."

'ಮುಂಜಾವು' ಸಂಪಾದಕರಲ್ಲಿ,

ತಾ. ೩೧-೧೦-೮೨ರ ನಿಮ್ಮ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟವಾದ ಗಜಾನನ ಯುವಕ ಸಂಘದ ಕೆಲವು ಸದಸ್ಯರುಗಳ ಹೇಳಿಕೆಯ ಬಗ್ಗೆ ಪ್ರತಿಕ್ರಿಯೆ.

ನಮ್ಮ ಯುವಕ ಸಂಘದ ಕೆಲವು ಸದಸ್ಯರುಗಳು ಸಂಘದ ಅಧ್ಯಕ್ಷರಾದ ಹೆಚ್. ಎಸ್. ಕೇಶವ ಸ್ವಾಮಿಯವರ ಮೇಲೆ ಆರೋಪ ಮಾಡಿರುವುದು ಸರಿಯಲ್ಲ. ಇವರು ಸಂಘದ ಏಳಿಗೆಗಾಗಿ ಶ್ರಮವಹಿಸಿ ಕೆಲಸ ಮಾಡುತ್ತಿದ್ದು, ಈ ಹಿಂದೆ ಹಲವು ರೀತಿಯಲ್ಲಿ ಸಂಘದ ಅಭಿವೃದ್ಧಿಗೆ ಹಾಗೂ ಜೀರ್ಣೋದ್ಧಾರಕ್ಕೆ ಕಾರಣರಾಗಿದ್ದಾರೆ. ಇವರ ಮೇಲಿನ ಆರೋಪ ಸತ್ಯಕ್ಕೆ ದೂರವಾದುದು. ಸಂಘದ ರಚನಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಊರಿನ ಹಲವಾರು ಅಭಿವೃದ್ಧಿಗಳಲ್ಲಿ ಇವರ ಪಾತ್ರ ಪ್ರಶಂಸನೀಯ. ಸಂಘದ ಒಡಕನ್ನುಂಟು ಮಾಡಲು ಕೆಲವು ವ್ಯಕ್ತಿಗಳು ಸಂಘದ ಕೆಲವು ಸದಸ್ಯರುಗಳನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಇದರಿಂದ ಸಂಘದ ಒಗ್ಗಟ್ಟಿಗೆ ತೊಡಕುಂಟಾಗುತ್ತದೆ. ಸಂಘದ ಬಗ್ಗೆ ಅಧ್ಯಕ್ಷರು ಎಂದೂ ಜವಾಬ್ದಾರಿ ತೋರಿದವರಲ್ಲ. ಅವರು ಪತ್ರಿಕೆಯಲ್ಲಿ ಹೇಳಿಕೆಯನ್ನೇನಾದರೂ ದೇವಸ್ಥಾನದ ಸಂಚಾಲಕರ ಬಗ್ಗೆ ಕೊಟ್ಟರೆ, ಇದು ಅವರ ವೈಯುಕ್ತಿಕ ವಿಚಾರ. ಅದನ್ನು ಸಂಘಕ್ಕೆ ಸಲಿಸುವ ಅವಶ್ಯಕತೆಯಿರಲಿಲ್ಲ.

—ಸದಸ್ಯರು, ಗಜಾನನ ಯುವಕ ಸಂಘ ಕಿಸವೆ, ಕೊಪ್ಪ ತಾ||

(೪ ಕಡೆ ಇದೆ)

## ಓದುಗರ ಪತ್ರಗಳು

## ರಾಜೀನಾಮೆ ಪತ್ರ ರೆಡಿಯಾಗಿದೆಯೆ?

ಸಂಪಾದಕರೇ,

ನಿಮ್ಮ ೫-೧೨-೮೨ರ ಪತ್ರಿಕೆಯಲ್ಲಿನ ಡಿ. ಹನುಮಂತ ನಾಯ್ಕರ ಸ್ಪಷ್ಟೀಕರಣಕ್ಕೆ (ಸ್ಪಷ್ಟೀಕರಣ ಎನ್ನುವುದಕ್ಕಿಂತ "ಭಂಡ ಸವಾಲು" ಎಂದರೇ ಸರಿಯಾದೀತು!) ಪ್ರತಿಕ್ರಿಯಿಸುತ್ತಿದ್ದೇನೆ.

ಮೇಲುಬೈಲಿನ ಪಂಚಾಯ್ತಿ ಸದಸ್ಯರ ನಿರ್ಲಕ್ಷ್ಯ ಸತ್ಯಕ್ಕೆ ದೂರವಾದದ್ದಂತೆ. ಹನುಮಂತ ನಾಯ್ಕರು ತಮ್ಮ ಕ್ಷೇತ್ರ ಬಿಟ್ಟು ಬಾಳೆಹೊನ್ನೂರಿನ ತಮ್ಮ ಮಾವನ ಮನೆಯಲ್ಲಿ ಕುಳಿತು ಈ ಗ್ರಾಮಕ್ಕೇನು ಮಾಡಬಲ್ಲರು? ಮತ್ತು ಜನತೆಗೆ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಕೇಳಿದರೆ "ಬೇಕಾದರೆ ಸ್ವಂತ ಮಾಡಿಕೊಳ್ಳಲಿ, ನಮಗೇನು ಸ ಯಾಕ್ಟ್ರಿ ಲಾಭವಿಲ್ಲ" ಎನ್ನುವ ಇವರು ಎಷ್ಟರಮಟ್ಟಿಗೆ ಗ್ರಾಮದ ಏಳ್ಗೆ ಮಾಡಿಯಾರು?

ಇನ್ನು ಸೌಲಭ್ಯಗಳ ಕಬಳಿಕೆ. ಜನರಿಗೆಂದು ಬಂದ ತೆಂಗಿನ ಸಸಿಗಳೆಲ್ಲ ನಾಪತ್ತೆಯಾಗಲು ಕಾರಣವೇನು? "ಕೊಟ್ಟ ಶಾಸ್ತ್ರ" ಮಾಡಲು ಯಾರೋ ನಾಲ್ಕಾರು ಜನರಿಗೆ ಅದರಲ್ಲೂ ಬಾಡಿದ, ಹುಳುಹಿಡಿದ ಸಸಿಗಳನ್ನು ಕೊಟ್ಟರೆ ಜನರಿಗೆ ಸೌಲಭ್ಯ ಸಿಕ್ಕಂತಾಯಿತೇ? ಗ್ರಾಮಕ್ಕೆ ಬಂದ ಉಳಿದ ಸಸಿಗಳು ಏನಾಗುತ್ತವೆ?

ಮುರಿದು ಬಿದ್ದಿರುವ ಮನೆಗಳ ಅವಶೇಷಗಳು ಎದುರಿಗೇ ಕಾಣುತ್ತಿರುವಾಗ "ಜನತಾ ಮನೆಗಳ ಜಖಂ" ಸತ್ಯದೂರ ಸಂಗತಿ ಎಂದು ಅವರು ಒದರಿದರೆ ಅವರನ್ನು ಜನ ಏನೆನ್ನಬೇಕು? ನೀರು ತುಂಬಿಟ್ಟು ಎರಡು ನಿಮಿಷದಲ್ಲೇ ನೀರು ಸೋರಿಹೋಗುವ ಕೊಡವನ್ನು "ತೂತಾದ ಕೊಡ" ಎನ್ನಬಹುದಲ್ಲವೇ? ಎಲ್ಲೋ ಒಂದೊಂದು ಅಂಥಾದ್ದು ಬರಬಹುದು ಎಂದು ಇವರು ಹೇಳಬಹುದು. ತೂತು ಕೊಡವನ್ನು ಗುರ್ತಿಸಿ ಹೇಳಿದರೂ "ನಿಮ್ಮ ಅದೃಷ್ಟ ಬಂದಿದ್ದನ್ನು ತೊಗೊಂಡು ಹೋಗಿ" ಎನ್ನುವ ಬದಲು ಬೇರೆ ಒಳ್ಳೆ ಕೊಡ ಕೊಟ್ಟಿದ್ದರೆ ಅಪವಾದಕ್ಕೆ ಅವಕಾಶವಿರಲಿಲ್ಲ, ಅಲ್ಲವೆ?

ಕುರಿಗಳನ್ನು ಕೊಟ್ಟ ಕೆಲವೇ ದಿನಗಳಲ್ಲಿ ಅವು ಸತ್ತುಹೋದರೆ ಕಾಯಿಲೆ ಹಿಡಿದ ಕುರಿಗಳು ಎಂಬ ಸಂಶಯ ಬರುವುದು ಸಹಜ. ಪಡೆದವರು — ನೋಡಿದವರು ಹೇಳುವಾಗ ಅಲ್ಲವೆನ್ನುವುದು ಹೇಗೆ?

ಇನ್ನು ಯುವಕ ಸಂಘದ ಹಣದ ವ್ಯವಹಾರದ ಬಗ್ಗೆ ಸಂಘದ ಸದಸ್ಯರು ಕೇಳಿದರೂ ಉತ್ತರ ಬರುವುದಿಲ್ಲವಾದ್ದರಿಂದ ಮತ್ತು ಜನರೂ ಹೇಳುವುದರಿಂದ ಹಣ ದುರುಪಯೋಗದ ಬಗ್ಗೆ ಶಂಕಿಸಬೇಕಾಗಿದೆ.

ಹನುಮಂತ ನಾಯ್ಕರೇ, ಎಲ್ಲಿ, ನಿಮ್ಮ ರಾಜೀನಾಮೆ ಪತ್ರ ರೆಡಿಯಾಗಿದೆಯೇ? ರಾಜೀನಾಮೆ ಸಲ್ಲಿಸಿದೊಡನೆ ಸ್ಥಳೀಯ ಪತ್ರಿಕೆಗಳಿಗೆ ತಿಳಿಸಿ. ನೀವು ರಾಜೀನಾಮೆ ನೀಡಿದ ವಿಷಯ ನಮಗೂ ತಿಳಿದೀತು?!

—ವರದಿಗಾರ,
"ಗಿರಿವಾರ್ತಾ".

## ಕೊಪ್ಪ ತಾ|| ಯುವ ಮೇಳ

(೨ನೇ ಪುಟದಿಂದ)

ಸ್ಪರ್ಧೆಗಳಲ್ಲಿ ಕೆಲ ವಿದ್ಯಾರ್ಥಿಗಳು ಭಾಗವಹಿಸಿದ್ದರೂ ತಾ|| ಅ|| ಮಂ|| ಉಪಾಧ್ಯಕ್ಷೆ ವಿದ್ಯಾರ್ಥಿನಿಯೊಬ್ಬರನ್ನು ಮಾತ್ರ ಭಾಗವಹಿಸಬಾರದೆಂದು "ಕಾನೂನು" ಮಾಡಿದುದರಲ್ಲಿ ಏನೋ "ರಾಜಕೀಯ" ಇದೆ ಎನ್ನಿಸಿತು. ಇನ್ನು, ಬಿಸಿರಕ್ತದ ಯುವಕರು ಸೇರಿದ ಮೇಲೆ ಸ್ವಲ್ಪ ಗಲಾಟೆಯಾಗುವುದು ಸಹಜ! ಅದಕ್ಕೆ ಈ ಮೇಳವೇನೂ ಹೊರತಾಗಿರಲಿಲ್ಲ.

ಬರೀ ಬಹುಮಾನಕ್ಕಾಗಿ ಸ್ಪರ್ಧಿಸುವುದಾಗಲಿ, ಬಹುಮಾನ ಬರದಿದ್ದಾಗ ಜಗಳಾಡುವುದಾಗಲಿ ಸರಿಯಲ್ಲ. ಮನರಂಜನೆಯಾಗಲಿ, ಪ್ರತಿಭೆಯ ವಿಕಾಸಕ್ಕೆ ಸೂಕ್ತ ಅವಕಾಶವಾಗಲೀ ಸೊನ್ನೆಯಾಗಿರುವ ಹಳ್ಳಿಗಾಡಿನ ಯುವ ಜನರಿಗೆ ಸದ್ಯ ಸಿಗುತ್ತಿರುವ ಇಂಥ ಸ್ವಲ್ಪ ಅವಕಾಶವನ್ನಾದರೂ ಅವರು ಪೂರ್ಣವಾಗಿ ಬಳಸಿಕೊಳ್ಳುವುದು ಬಹಳ ಮುಖ್ಯ. ಹೆಚ್ಚು ಕೇಳುವುದೇನಿದ್ದರೂ ಆಮೇಲೆ.

—ಮಾ. ಶೇ. ಗಣಪತಿ.

## ಮತದಾರರ ಅಭಿಪ್ರಾಯ

[ಮತ್ತೊಮ್ಮೆ ಚುನಾವಣೆ ಬಂದಿದೆ. ಇದರ ಬಗ್ಗೆ ಮತದಾರರಾದ ನಿಮ್ಮ ಅಭಿಪ್ರಾಯ ಏನು?

ನಿಮ್ಮ ಆಲೋಚನೆಯ ಹೊಸ ಅಂಶಗಳನ್ನು ಬರೆಯಿರಿ. ಬರಹ ಆದಷ್ಟು ಚಿಕ್ಕದಾಗಿ, ಚೊಕ್ಕವಾಗಿ ಇರಲಿ.

ಕಾಂಗ್ರೆಸ್ಸನ್ನು ವಿರೋಧಿಸುವವರು, ಮಾತ್ರವಲ್ಲ ಕಾಂಗ್ರೆಸ್ಸನ್ನು ಬೆಂಬಲಿಸುವವರೂ ತಮ್ಮ ಅಭಿಪ್ರಾಯ ತಿಳಿಸಬಹುದು.

ಇಲ್ಲಿ ೨ ಅಭಿಪ್ರಾಯಗಳನ್ನು ಪ್ರಕಟಿಸಿದೆ. —ಸಂ.]

## ನಾವೇಕೆ ಮತ ನೀಡಬೇಕು ಹೇಳಿ?

೫-೧-೮೩ರ ಚುನಾವಣೆಯಲ್ಲಿ ಎಲ್ಲಾ ಸೌಲತ್ತುಗಳಿಂದಲೂ ವಂಚಿತರಾದ ಮಧ್ಯಮ ವರ್ಗದ ಜನತೆ ಮತ್ತು ಭೂಸುಧಾರಣೆಯಿಂದ ನೊಂದ ಜನತೆ ಈ ಕೆಳಕಂಡ ಕಾರಣಗಳಿಂದ ಮತದಾನವನ್ನು ಬಹಿಷ್ಕರಿಸಲು ನಿರ್ಧರಿಸಬೇಕು:

೧) ನಮ್ಮ ರಾಜ್ಯದಲ್ಲಿ ಶ್ರೀಮಂತ ಜನತೆ ಮತ್ತು ತೀರಾ ಕೆಳದರ್ಜೆಯ ಜನತೆ ಪ್ರತ್ಯಕ್ಷ – ಅಪ್ರತ್ಯಕ್ಷವಾಗಿ ಎಲ್ಲಾ ಸೌಲತ್ತುಗಳನ್ನು ಸರ್ಕಾರದಿಂದ ಪಡೆಯುತ್ತಿದೆ. ಆದರೆ ೧೦೦ಕ್ಕೆ ೬೦ರಷ್ಟಿರುವ ದುಡಿಮೆಗಾರ ಮಧ್ಯಮ ವರ್ಗದ ಜನತೆ ಸರ್ಕಾರದ ಎಲ್ಲಾ ಸೌಲತ್ತುಗಳಿಂದಲೂ ಸಂಪೂರ್ಣ ವಂಚಿತರು. ಯಾವದೇ ಕಾರಣಕ್ಕಾಗಿ ನಿಗದಿಯಾದ ವರಮಾನದಂತೆ, ವರಮಾನ ದೃಢೀಕರಣ ಪತ್ರ ಪಡೆಯಲು ಇವರು ಅನರ್ಹರು. ಈ ವರ್ಗದ ಜನತೆ ಕಂದಾಯ, ತೆರಿಗೆ ಕೊಡಲು ಮಾತ್ರ ಜವಾಬ್ದಾರರು.

೨) ಶ್ರೀಮಂತರೂ ಅಲ್ಲದ, ಬಡವರೂ ಅಲ್ಲದ ಇವರುಗಳು ಸರ್ಕಾರದಿಂದಲೂ ಅಧಿಕಾರಿ ವರ್ಗದಿಂದಲೂ ಒಂದು ರೀತಿ ತಿರಸ್ಕೃತರು.

೩) ಭೂಸುಧಾರಣೆಯಿಂದ ಎಲ್ಲವನ್ನೂ ಕಳೆದುಕೊಂಡಿರತಕ್ಕ ಜನತೆಗೆ ಸರ್ಕಾರ ಕಿಂಚಿತ್ತಾದರೂ ಸಹಾನುಭೂತಿ ತೋರಿಸಿದೆಯೇ? ಯಾವ ಸಹಾಯ ನೀಡಿದೆ? ಅವರು ಬದುಕಬೇಕೆ, ಬೇಡವೆ?

**೪) ಐದು ವರ್ಷ ಶಾಸಕನಾದವನಿಗೆ ಅವನ ಜೀವಿತ ಪರ್ಯಂತ ನಿವೃತ್ತಿ ವೇತನವನ್ನು ಸರ್ಕಾರ ನೀಡುತ್ತಿದೆ.** ನೌಕರರಿಗೆ ಹೇಗೂ ಸರಿ. ಕೆಳದರ್ಜೆಯ ಜನಕ್ಕೆ ಹಲವು ರೀತಿಯ ವಿಮಾ ಯೋಜನೆಗಳು; ನಿವೃತ್ತಿ ವೇತನಗಳು, ಹಲವು ಬಗೆಯ ಪರಿಹಾರಗಳು. ಬಡಜನತೆಗೆ ಸರ್ಕಾರ ಕೊಡಮಾಡಿರುವ ಈ ಎಲ್ಲಾ ಸೌಲತ್ತುಗಳಿಗೂ ಸ್ವಾಗತ. ಸಂತೋಷ. ಆದರೆ ಮಧ್ಯಮ ದರ್ಜೆಯವರು ಕಡೆಗಣಿಸಲ್ಪಟ್ಟಿರುವದು ವಿಷಾದನೀಯ.

೫) ವಂಚಿತರಾದವರಿಗೆ ಯಾವ ಪಕ್ಷದ ಮೇಲೂ ಸಂಬಿಕೆ ಇಲ್ಲ, ವಿಶ್ವಾಸವೂ ಇಲ್ಲ. ಅಂತೆಯೇ ದ್ವೇಷವೂ ಇಲ್ಲ. ನಾವು ನಿರ್ಲಿಪ್ತರು. ನಾವು ಭಾರತೀಯರಲ್ಲ. ಕರ್ನಾಟಕ ರಾಜ್ಯದ ಪ್ರಜೆಗಳೂ ಅಲ್ಲ. ನಮಗೆ ಗೌರವದಿಂದ ಬದುಕಲು ಅವಕಾಶವೂ ಇಲ್ಲ. ಆದ್ದರಿಂದ ನಮ್ಮನ್ನು ಯಾವ ಪಕ್ಷದವರೂ ಓಟು ಕೇಳಬೇಡಿ.

ವಂಚಿತರಾದ ಮತದಾರರೇ, ಮತಗಟ್ಟೆಗೆ ಹೋಗಬೇಡಿ; ಮತದಾನ ಮಾಡಬೇಡಿ.

ಈ ಮೇಲ್ಕಂಡ ಅಂಶಗಳು ಶೃಂಗೇರಿ ವಿಧಾನ ಸಭಾ-ಕ್ಷೇತ್ರದ ಜನತೆಯ ನಿರ್ಧಾರವಾಗಲಿ.

ಶೃಂಗೇರಿ ಕ್ಷೇತ್ರದ ಜನತೆಯ ಪರವಾಗಿ—

— ಹೆಚ್. ವಿ. ಕೃಷ್ಣಮೂರ್ತಿ,
ವಿದ್ಯಾರಣ್ಯಪುರ, ಶೃಂಗೇರಿ.

## ಚುನಾವಣೆ ಮತ್ತು ಕನ್ನಡ: "ಕನ್ನಡಿಗರೇ, ಯೋಚಿಸಿ"

ಸ್ವಾತಂತ್ರ್ಯ ಹೋರಾಟದ ಬಹು ದೊಡ್ಡ ಸಾಧನೆಯೆಂದರೆ ಜನರಲ್ಲಿ ಹಿಂದೆಂದೂ ಕಾಣದಿದ್ದ ನಾಡು ನುಡಿಗಳ ಜಾಗೃತಿ ಮೂಡಿತು. ಆಡಳಿತದ ಸುಧಾರಣೆ, ಪ್ರಜಾಹಿತ, ಪ್ರಜಾರಾಜ್ಯದ ಕೂಗು ಮನೆಮನೆಯನ್ನು ಪ್ರವೇಶ ಮಾಡಿತು. ದೇಶಕ್ಕೊಂದು ರಾಷ್ಟ್ರ ಭಾಷೆ ಬೇಕೆಂದು ಅರಿವು ಹುಟ್ಟಿ, ಇಂಗ್ಲಿಷ್ ತನ್ನ ಮನ್ನಣೆಯನ್ನು ಕಳೆದುಕೊಂಡಿತು. ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳು ಹುಟ್ಟಿಕೊಂಡವು. ಈಗ ದೇಶದಲ್ಲಿ ಪ್ರತಿಯೊಂದು ಭಾಷೆಯೂ ತನ್ನ ಸ್ಥಾನಕ್ಕಾಗಿ ಹೋರಾಡುತ್ತಿವೆ.

ಕರ್ನಾಟಕ ಬಹು ಪ್ರಸಿದ್ಧವೂ ಪ್ರಾಚೀನವೂ ಆದ ಪ್ರದೇಶ. ಇಲ್ಲಿಯ ಭಾಷೆ ಕನ್ನಡ. ಈ ನಾಡಿನಲ್ಲಿ ಇತರ ಭಾಷೆಗಳು ಇರಬಾರದೆಂದು ಯಾರೂ ಹೇಳುತ್ತಿಲ್ಲ. ಈ ಪ್ರಾಂತದ ಭಾಷೆಯಾದ ಕನ್ನಡಕ್ಕೆ ಅಗ್ರಸ್ಥಾನ ಸಿಗಬೇಕು. ಸಾಮಾನ್ಯ ಎಲ್ಲಾ ಜನರಿಗೂ ಕನ್ನಡ ಭಾಷೆಯಿಂದ ಹೆಚ್ಚು ಪ್ರಯೋಜನ ಲಭಿಸಬಹುದು. ಇತರ ಭಾಷೆಗಳನ್ನು ಕಲಿತು ನಾವು ನಮ್ಮ ಭಾಷೆಯ ಸಂಪತ್ತನ್ನು ಹೆಚ್ಚಿಸಿ ಕೊಳ್ಳಬೇಕು ಅಷ್ಟೆ.

ವಿವೇಕಾನಂದ, ಕವಿ ರವೀಂದ್ರರಂತಹ ವ್ಯಕ್ತಿಗಳು ಮಾತೃ ಭಾಷೆಗೆ ಅಗ್ರಸ್ಥಾನ ಸಿಗಬೇಕೆಂದು ಹೇಳುವರು. ಶಿಕ್ಷಣ ಮಾಧ್ಯಮ ಮತ್ತು ವ್ಯವಹಾರದಲ್ಲಿ ಇದರ ಬಳಕೆಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದುಂಟು.

ರಾಷ್ಟ್ರಕವಿ ಕುವೆಂಪು ಸಲಹೆಯಂತೆ: ನಮ್ಮ ದೇಶಕ್ಕೆ ತ್ರಿಭಾಷಾ ಸೂತ್ರ ಸಾಕಾಗಿದೆ. ಪ್ರಾಂತೀಯ ಭಾಷೆಗಳಲ್ಲಿ ಶಿಕ್ಷಣ ಮಾಧ್ಯಮ ಹಾಗೂ ಆಡಳಿತವಿರಬೇಕು. ಇದರ ಜೊತೆಗೆ ಬೇರೆಯ ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗಿರಬೇಕೆಂಬುದು ಅವರ ಸಲಹೆ.

ವಿಧಾನಸಭೆಯ ಚುನಾವಣೆ ಹತ್ತಿರ ಬಂದಿದೆ. ಕನ್ನಡಿಗರೇ, ಯೋಚಿಸಿ. ಅಳುವ ಮಕ್ಕಳಿಗೆ ಬಾಳೆಹಣ್ಣು ತೋರಿದಂತೆ, "ಈಗ ಜಾರಿಗೆ ಬರುತ್ತೆ, ಆಗ ಜಾರಿಗೆ ಬರುತ್ತೆ" ಎಂದು ಕನ್ನಡಿಗರಿಗೇ 'ಕನ್ನ' ಹಾಕುವ ಸರ್ಕಾರ ನಮಗಾಗಲಿ ನಿಮಗಾಗಲಿ ಏಕೆ ಬೇಕು?

ತೂಕ ಮಾಡುವ ತಕ್ಕಡಿ ನಮ್ಮ ಕೈಯಲ್ಲಿರುವಾಗ ಚಿಂತೆ ಏಕೆ?

—ಎಚ್. ಎಂ. ಶೈಲಜಾ, ನ. ರಾ. ಪುರ.